ಡಿ ಡಬ್ಲ್ಯೂ1: ಶ್ರೀಮತಿ ಕವಲೂರು ಸರೋಜಮ್ಮ ಕೋಂ
ದಿಃ ಕವಲೂರು ಬಸವಣ್ಣೆಪ್ಪ

(ದಿನಾಂಕ 04-01-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀಸವಾಲು ವಾದಿ ಪರ ವಕೀಲರಾದ ಶ್ರೀ ಹೆಚ್ ಎಸ್ ಎನ್ ರವರಿಂದಃ-

ನನ್ನ ಹೆಸರಿನಲ್ಲಿ ಒಟ್ಟು 4 ಎಕರೆ 29 ಸೆಂಟ್ಸ ಆಸ್ತಿ ಇರುತ್ತದೆ, ಅದನ್ನು ಬಿಟ್ಟು ಬೇರೇ ಯಾವುದೇ ಆಸ್ತಿ ಇರುವುದಿಲ್ಲ. ಹನುಮಗೊಂಡನಹಳ್ಳಿ ಗ್ರಾಮದಲ್ಲಿ ಸರ್ವೆ ನಂ. 131 ಬಿ ರಲ್ಲಿ 1 ಎಕರೆ 70 ಸೆಂಟ್ಸ ಜಮೀನು ನನ್ನ ಹೆಸರಿನಲ್ಲಿ ಇರುತ್ತದೆಂದರೆ ಸರಿ.

2. ನನಗೆ 4 ಜನ ಮಕ್ಕಳು. ಅವರೆಂದರೆ ಶಿವಕುಮಾರ, ಶರಣಪ್ಪ, ಕವಿತಾ ಮತ್ತು ಕರಿಬಸಮ್ಮ ಇರುತ್ತಾರೆ. ನನ್ನ ಮಕ್ಕಳಿಗೆ ಸ್ವಲ್ಪ ಸ್ವಲ್ಪ ಓದಲು ಬರೆಯಲು ಬರುತ್ತದೆ. ನಾನು ಹೋಟೇಲ್ ವ್ಯವಹಾರ ಮಾಡುತ್ತಿದ್ದೆ ಎಂದರೆ ಸರಿ. ಹೋಟೆಲಿನ ಬಗ್ಗೆ ನನಗೆ ವ್ಯವಹಾರ ಜ್ಞಾನ ಇರುತ್ತದೆಂದರೆ ಸರಿ. ವಾದಿಯಾದ ಬಾವಿ ಕೊಟ್ರೇಶಪ್ಪ ನನಗೆ ಪರಿಚಯ ಇರುತ್ತಾರೆಂದರೆ ಸರಿ.

3. ನನಗೆ ಮತ್ತು ನನ್ನ ಮಕ್ಕಳಿಗೆ ಸಹಿ ಮಾಡಲು ಬರುತ್ತದೆಂದರೆ ಸರಿ. ದಾವಾಸ್ತಿಗೆ ನಾನು ಬೋರನ್ನು ಹಾಕಿಸಿರುವುದಿಲ್ಲ, ದಾವಾಸ್ತಿಯು ಮಳೆ ಆಶ್ರಿತ ಭೂಮಿಯಾಗಿರುತ್ತದೆಂದರೆ ಸರಿ. ದಾವಾಸ್ತಿಯ ಸರ್ವೆ ನಂ. 206 ಎ ಮತ್ತು 206 ಬಿ ಆಗಿರುತ್ತದೆ. ದಾವಾಸ್ತಿ ಸರ್ವೆ ನಂ. 206 ಎ ಇದು ಒಟ್ಟು 8 ಎಕರೆ 24 ಸೆಂಟ್ಸ ಇರುತ್ತದೆಂದರೆ ಸರಿ. ಅದರಲ್ಲಿ 2 ಎಕರೆ 6 ಸೆಂಟ್ಸ ಸ್ವತ್ತು ನನ್ನ ಭಾಗಕ್ಕೆ ಬಂದಿರುತ್ತದೆಂದರೆ ಸರಿ. ದಾವಾಸ್ತಿ ಸರ್ವೆ ನಂ. 206 ಬಿ ಇದು ಒಟ್ಟು 9 ಎಕರೆ 29 ಸೆಂಟ್ಸ ಇರುತ್ತದೆಂದರೆ ಸರಿ. ಅದರಲ್ಲಿ 2 ಎಕರೆ 23 ಸೆಂಟ್ಸ ಸ್ವತ್ತು ನನ್ನ ಭಾಗಕ್ಕೆ ಬಂದಿರುತ್ತದೆಂದರೆ ಸರಿ.

4. ಎರಡೂ ದಾವಾಸ್ತಿಗಳ ಚಕ್ಕುಬಂದಿಗಳ ಪೂಃ ಮಸಲವಾಡದವರ ಜಮೀನು, ಪಃಹಳ್ಳ, ಉಃ ಹಳ್ಳಿ ಹಾಗೂ ದಃ ನೀಲಗುಂದ ಟವರ್ ಬರುತ್ತದೆ. ಸರ್ವೆ ನಂ. 206 ಎ ಇದು ಒಟ್ಟು 8 ಎಕರೆ 24 ಸೆಂಟ್ಸ ಸ್ವತ್ತು ಮತ್ತು ಸರ್ವೆ ನಂ. 206 ಬಿ ಒಟ್ಟು 9 ಎಕರೆ 29 ಸೆಂಟ್ಸ ಸ್ವತ್ತು ಇದುವರೆಗೂ ಪೋಡಿಯಾಗಿರುವುದಿಲ್ಲವೆಂದರೆ ಸರಿ.

5. ದಿಃ 13-12-2011 ರಂದು ನಾನು ವಾದಿಗೆ ದಾವಾ ಸ್ವತ್ತಿನ ಕ್ರಯಪತ್ರವನ್ನು ಬರೆದುಕೊಟ್ಟಿರುತ್ತೇನೆಂದರೆ ಸರಿ, ಸಾಕ್ಷಿ ಸ್ವಇಚ್ಛೆಯಿಂದ ಮುಂದುವರೆದು ನಾನು ಬರೆದ ಪತ್ರಗಳು ಬೇರೆ ಇರುತ್ತವೆಂದು ನುಡಿಯುತ್ತಾರೆ ನಿಪಿ-1 ರ ನೊಂದಾಯಿತ ಕ್ರಯ

ಕರಾರಿನಲ್ಲಿರುವಂತಹ ನಿಪಿ-1ಇ ನನ್ನ ಸಹಿಯಾಗಿರುತ್ತದೆಂದರೆ ಸರಿ. ನಿಪಿ-1ರ ದಾಖಲಾತಿಯಲ್ಲಿರುವ ಉಳಿದ ಸಹಿಗಳು ನಾನು ಮಾಡಿರುವಂತಹ ಸಹಿಗಳಾಗಿರುತ್ತವೆಂದರೆ ಸರಿ. ನಿಪಿ-1ರ ನೊಂದಾಯಿತ ಕ್ರಯದ ಕರಾರಿಗೆ ನನ್ನ ಮಕ್ಕಳಾದ ಶಿವಕುಮಾರ್ ಮತ್ತು ಶರಣಪ್ಪರವರು ಸಾಕ್ಷಿದಾರರಾಗಿ ಸಹಿಯನ್ನು ಮಾಡಿರುತ್ತಾರೆಂದರೆ ಸರಿ. ನನ್ನ ಮಗ ಶಿವಪ್ಪ ಎರಡು ಕಡೆ ನಿಪಿ-1ರ ದಾಖಲಾತಿಯಲ್ಲಿ ಸಹಿಯನ್ನು ಮಾಡಿರುತ್ತಾರೆಂದರೆ ಸರಿ. ನಿಪಿ-1ರ ದಾಖಲಾತಿಗೆ ಉಪ ನೊಂದಾವಣಾಧಿಕಾರಿಗಳ ಕಚೇರಿಯಲ್ಲಿ ಸಹಿಯನ್ನು ಮಾಡಲಾಗಿರುತ್ತದೆಂದರೆ ಸರಿ, ಸಾಕ್ಷಿ ಸ್ವಇಚ್ಚೆಯಿಂದ ಮುಂದುವರೆದು ನಾನು 6 ಹಾಳೆಗೆ ಸಹಿಯನ್ನು ಮಾಡಿದ್ದು, ಸಹಿಯನ್ನು ಮಾಡುವಾಗ ಮೋಸವಿದೆಯೇ ಎಂದು ನನ್ನ ವಕೀಲರನ್ನು ಕೇಳಿದ್ದು ಅವರು ನನ್ನ ಮೇಲೆ ನಂಬಿಕೆ ಇಲ್ಲವೇ ಎಂದು ಹೇಳಿರುತ್ತಾರೆಂದು ನುಡಿಯುತ್ತಾರೆ.

6. ನಿಪಿ-1ರ ನೊಂದಾಯಿತ ಕ್ರಯದ ಕರಾರು ಪತ್ರಕ್ಕೆ ನಾನೇ ಮಾಹಿತಿಯನ್ನು ಕೊಟ್ಟಿರುತ್ತೇನೆ. ನಿಪಿ-1ರ ನೊಂದಾಯಿತ ಕ್ರಯಪತ್ರದಲ್ಲಿ ಬರೆಯಲಾಗಿರುವಂತಹ ಶೆಡ್ಯೂಲನ್ನು ನಾನೇ ಹೇಳಿ ಬರೆಸಿರುತ್ತೇನೆಂದರೆ ಸರಿ.

7. ನಿಪಿ-1ರ ನೊಂದಾಯಿತ ಕ್ರಯದ ಕರಾರನ್ನು ಮಾಡುವ ಮೊದಲೇ ವಾದಿಯು ನಮಗೆ ರೂ.1,95,000/- ಹಣವನ್ನು ಮುಂಗಡವಾಗಿ ಕೊಟ್ಟಿದ್ದರು ಎಂದರೆ ಸರಿ. ಉಳಿದ ರೂ.5,000/- ಹಣವನ್ನು ಕ್ರಯಪತ್ರ ಮಾಡುವ ಸಮಯದಲ್ಲಿ ಕೊಡಲಾಗುತ್ತದೆಂದು ನಿಪಿ1ರ ದಾಖಲೆಯಲ್ಲಿ ಬರೆಯಲಾಗಿತ್ತು ಎಂದರೆ ಸರಿ. ಅದಕ್ಕೆ ನಾನು ಒಪ್ಪಿಕೊಂಡಿದ್ದೆ ಎಂದರೆ ಸರಿ.

8. ವಾದಿಯು ನನಗೆ ಅವರ ವಕೀಲರ ಮೂಲಕ ದಿಃ21-10-2014 ರಂದು ತಿಳುವಳಿಕೆ ನೋಟೀಸ್ ಕೊಟ್ಟಿದ್ದರು ಎಂದರೆ ಸರಿ. ನಿಪಿ-5 ರ ಅಂಚೆ ಸ್ವೀಕೃತಿಯಲ್ಲಿರುವಂತಹ ಸಹಿಯು ನನ್ನ ಸಹಿಯಾಗಿರುತ್ತದೆಂದರೆ ಸರಿ. ಅದಕ್ಕೆ ನಾನು ಪ್ರತ್ಯುತ್ತರವನ್ನು ಕೊಟ್ಟಿರುವುದಿಲ್ಲವೆಂದರೆ ಸರಿ. ಸಾಕ್ಷಿಯು ಸ್ವಇಚ್ಚೆಯಿಂದ ಮುಂದುವರೆದು ನಾನು ಆ ನೋಟೀಸನ್ನು ನನ್ನ ವಕೀರ ಬಳಿಗೆ ತೆಗೆದುಕೊಂಡು ಹೋಗಿದ್ದು ಅವರು ಬಗೆಹರಿಸೋಣವೆಂದು ಹೇಳಿದರೆಂದು ನುಡಿಯುತ್ತಾರೆ.

9. ದಿಃ 05-11-2014 ರಂದು ನಾನು ಬಂದು ಪೋಡಿ ನಕಾಶೆ ಮಾಡಿಸಿ ಕೊಡಲು ಪಹಣಿ ದಾಖಲಾತಿಗಳನ್ನು ಕೊಡುವುದಾಗಿ ಉಪ ನೊಂದಣಾಧಿಕಾರಿಗಳ ಕಚೇರಿಯಲ್ಲಿ ವಾದಿಯು ಕಾಯುತ್ತಿದ್ದರು ಎಂದರೆ ಸರಿ. ಸಾಕ್ಷಿಯು ಸ್ವಇಚ್ಚೆಯಿಂದ ಮುಂದುವರೆದು ನನಗೆ

ದಾವಾಸ್ತಿ ಮಾತ್ರವೇ ಇದ್ದು, ನಾನು ಅದನ್ನು ವಾದಿಗೆ ಮಾರಾಟ ಮಾಡಿರುವುದಿಲ್ಲ, ದಾವಾಸ್ತಿಗಳು ಜಂಟಿ ಪಹಣಿಯಲ್ಲಿರುತ್ತವೆಂದು ನುಡಿಯುತ್ತಾರೆ.

10. ನಿಡಿ-1 ದಾವಾ ಸರ್ವೆ ನಂ.206 ಎ ರ ಒಟ್ಟು 8 ಎಕರೆ 24 ಸೆಂಟ್ಸ ಸ್ವತ್ತು ಕವಲೂರು ದೊಡ್ಡಬಸಪ್ಪ, ಸೋಮಶೇಖರಪ್ಪ, ಬಸವಣ್ಣೆಪ್ಪ ರವರ ಜಂಟಿ ಹೆಸರಿನಲ್ಲಿರುವಂತಹ ಆಸ್ತಿಯಾಗಿರುತ್ತದೆಂದರೆ ಸರಿ.

11. ನಿಡಿ-1 ರಲ್ಲಿರುವಂತಹ 1988-89 ರ ದೃಢೀಕೃತ ಪಹಣಿಯಲ್ಲಿ ದಾವಾ ಸ್ವತ್ತಿನ ಸರ್ವೆ ನಂ.206 ಎ ಒಟ್ಟು 8 ಎಕರೆ 24 ಸೆಂಟ್ಸ ಸ್ವತ್ತಿನಲ್ಲಿ 2 ಎಕರೆ 6 ಸೆಂಟ್ಸ ಸ್ವತ್ತು ನನ್ನ ಹೆಸರಿಗೆ ಪಹಣಿ ದಾಖಲಾತಿ ಬಂದಿರುತ್ತದೆಂದರೆ ಸರಿ.

12. ನಿಡಿ-2 ದಾವಾ ಸರ್ವೆ ನಂ.206 ಬಿ ರ ಒಟ್ಟು 9 ಎಕರೆ 29 ಸೆಂಟ್ಸ ಸ್ವತ್ತು ಕವಲೂರು ದೊಡ್ಡಬಸಪ್ಪ, ಸೋಮಶೇಖರಪ್ಪ, ಬಸವಣ್ಣೆಪ್ಪ ರವರ ಜಂಟಿ ಹೆಸರಿನಲ್ಲಿರುವಂತಹ ಆಸ್ತಿಯಾಗಿರುತ್ತದೆಂದರೆ ಸರಿ.

13. ನಿಡಿ-2 ರಲ್ಲಿರುವಂತಹ 1988-89 ರ ದೃಢೀಕೃತ ಪಹಣಿಯಲ್ಲಿ ದಾವಾ ಸ್ವತ್ತಿನ ಸರ್ವೆ ನಂ.206 ಬಿ ಒಟ್ಟು 9 ಎಕರೆ 29 ಸೆಂಟ್ಸ ಸ್ವತ್ತಿನಲ್ಲಿ 2 ಎಕರೆ 23 ಸೆಂಟ್ಸ ಸ್ವತ್ತು ನನ್ನ ಹೆಸರಿಗೆ ಪಹಣಿ ದಾಖಲಾತಿ ಬಂದಿರುತ್ತದೆಂದರೆ ಸರಿ.

14. ಇಲ್ಲಿಯವರೆಗೂ ಸರ್ವೆ ನಂ. 206 ಎ ರ 2 ಎಕರೆ 6 ಸೆಂಟ್ಸ ಸ್ವತ್ತು ಮತ್ತು 206 ಬಿ ರ 2 ಎಕರೆ 23 ಸೆಂಟ್ಸ ಸ್ವತ್ತು ನನ್ನ ಹೆಸರಿನಲ್ಲಿಯೇ ಪಹಣಿ ದಾಖಲಾತಿ ಇರುತ್ತದೆಂದರೆ ಸರಿ.

15. ವಾದಿಯು ಸದರಿ ದಾವಾಸ್ತಿಗಳನ್ನು ಪೋಡಿ ಮಾಡಿಸಿ ಆ ನಂತರ ಆತನ ಹೆಸರಿಗೆ ಕ್ರಯಪತ್ರವನ್ನು ಮಾಡಿಕೊಡುವಂತೆ ಹಲವಾರು ಬಾರಿ ನನ್ನನ್ನು ಕೇಳಿದ್ದರೆಂದರೆ ಸರಿ ಹಾಗೂ ನಾನು ಎಷ್ಟು ಬಾರಿ ಕೇಳಿದರೂ ಮಾಡಿಸಿಕೊಟ್ಟಿರುವುದಿಲ್ಲವೆಂದರೆ ಸರಿ.

16. ನಿಡಿ-4 ರ ದಾಖಲಾತಿಯು ಧವಸ-ದಾನ್ಯ ಖರೀದಿ ಲೈಸನ್ಸ ಪ್ರತಿಯಾಗಿರುತ್ತದೆಂದರೆ ಸರಿ. ನಿಡಿ-5 ರಿಂದ 7 ರ ದಾಖಲೆಗಳು ವಾದಿಯ ಅಂಗಡಿಗೆ ಸಂಬಂಧಪಟ್ಟಂತಹ ದಾಖಲೆಗಳಾಗಿರುತ್ತವೆಂದರೆ ಸರಿ. ನಿಡಿ-4 ರಿಂದ 7 ರ ದಾಖಲೆಗಳು ರಸಾಯನಿಕ ರಸಗೊಬ್ಬರ ಮತ್ತು ಔಷಧಿಗಳ ಲೈಸನ್ಸ ಆಗಿರುವುದಿಲ್ಲವೆಂದರೆ ಸರಿ. ವಾದಿಯು ಎ

ಪಿ ಎಂ ಸಿ ಆವರಣದಲ್ಲಿ ರೈತರು ತೆಗೆದುಕೊಂಡು ಬಂದಂತಹ ಧವಸ ದಾನ್ಯಗಳನ್ನು ಹರಾಜಿನ ಮೂಲಕ ಖರೀದಿ ಮಾಡುತ್ತಾರೆಂದರೆ ಸರಿ. ನಿಡಿ-4 ರಿಂದ 7ರ ದಾಖಲೆಗಳು ಅದಕ್ಕೆ ಸಂಬಂಧಪಟ್ಟಂತಹ ದಾಖಲೆಗಳಾಗಿರುತ್ತವೆಂದರೆ ಸರಿ. ಕಾರಣ ವಾದಿಯು ಹಣವನ್ನು ಕೊಟ್ಟು ವ್ಯವಹಾರವನ್ನು ಮಾಡುವಂತಹ ಪರಿಸ್ಥಿತಿ ಇರುವುದಿಲ್ಲವೆಂದರೆ ಸರಿಯಲ್ಲ. ವಾದಿಯ ಹೆಸರಿನಲ್ಲಿ ಯಾವುದೇ ಬೀಜ ಮತ್ತು ಗೊಬ್ಬರದ ಅಂಗಡಿ ಇರವುದಿಲ್ಲವೆಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನಾನು ವಾದಿಯ ಹತ್ತಿರವೇ ವ್ಯವಹಾರವನ್ನು ಮಾಡುತ್ತಿದ್ದೆ ಎಂದು ನುಡಿಯುತ್ತಾರೆ. ನಾನು ವಾದಿಯು ವ್ಯವಹಾರ ಮಾಡುತ್ತಿರುವಂತಹ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

17. ನಿಪಿ-1ರ ಶೆಡ್ಯೂಲಿನಲ್ಲಿರುವಂತಹ ಚಕ್ಕುಬಂದಿಯು ಸರಿ ಇರುತ್ತದೆ. ದಾವಾಸ್ತಿಯ ಪೂಃ ಮಸಲವಾಡ ಗಂಗಮ್ಮನವರ ಜಮೀನು ಇರುತ್ತದೆಂದರೆ ಸರಿ, ಪಃ ಹಳ್ಳ ಇರುತ್ತದೆಂದರೆ ಸರಿ, ಉಃ ಕವಲೂರು ಬಸವರಾಜ ಇವರ ಜಮೀನು ಇರುತ್ತದೆಂದರೆ ಸರಿ, ದಃ ಕವಲೂರು ಮಹಾದೇವಕ್ಕ ಕೋಂ ಸಣ್ಣಬಸಪ್ಪನವರ ಜಮೀನು ಬರುತ್ತದೆಂದರೆ ಸರಿ. ನಾನು ವಾದಿಗೆ ಮೋಸ ಮಾಡುವ ಉದ್ದೇಶದಿಂದ ನಿಪಿ-1ರ ದಾಖಲಾತಿ ಶೆಡ್ಯೂಲಿನಲ್ಲಿ ದಕ್ಷಿಣಕ್ಕೆ ಬಾವಿ ಮಲ್ಲಿಕಾರ್ಜುನ ಮತ್ತು ನೀಲಗುಂದ ಹನುಮಜ್ಜರವರ ಜಮೀನು ಬರುತ್ತದೆಂದು ಬರೆಸಿರುತ್ತೇನೆಂದರೆ ಸರಿಯಲ್ಲ.

( ಮುಂದುವರೆದ ಪಾಟೀಸವಾಲಿಗೆ ವಾದಿ ಪರ ವಕೀಲರು ಕಾಲಾವಕಾಶ ಕೋರಿದರು, ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ